# ಹಿಂದಿ ಸಹಿತ ಕನ್ನಡಕ್ಕೂ ಹಿತ!

ಹಿಂದಿ ವೆಬ್‌ಸಿರೀಸ್ ಒಂದರಲ್ಲಿ ನಟಿಸುತ್ತಿರುವ ಹಿತಾ ಚಂದ್ರಶೇಖರ್ ಅಭಿನಯದ ‘ಶುಭ ಮಂಗಳ’ ಸಿನಿಮಾ ಅಕ್ಟೋಬರ್ 14ರಂದು ಬಿಡುಗಡೆಯಾಗಿದೆ.

■ ಪದ್ಮನಾಭ ಭಟ್



‘ಮದುವೆ ಮನೆ ಎಂದರೆ ಅದು ಹಲವು ಕಥೆಗಳ ಸಂಗಮತಾಣ. ಅಲ್ಲಿ ಏನೆಲ್ಲವೂ ನಡೆಯುತ್ತಿರುತ್ತವೆ. ಮದುವೆಯ ಜೊತೆಗೆ ಹಲವು ಕಥೆಗಳ ಟ್ರ್ಯಾಕ್‌ಗಳು ಓಡುತ್ತಿರುತ್ತವೆ. ನಾನು ಯಾರದಾದರೂ ಮದುವೆಗೆ ಹೋದಾಗಲೂ ನನಗೆ ಇಲ್ಲಿ ಎಷ್ಟೊಂದು ಕಥೆಗಳಿವೆಯಲ್ಲ ಅನಿಸುತ್ತಿತ್ತು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಇರುತ್ತಾರೆ. ಅವನ್ನೆಲ್ಲ ಗಮನಿಸುತ್ತಿದ್ದೆ. ಇಂಥ ವಿಷಯದ ಸುತ್ತಲೇ ನಡೆಯುವ ಒಂದು ಕಥೆ ನನ್ನ ಬಳಿಗೆ ಬಂದಾಗ ಬೇಡ ಎನ್ನಲು ಕಾರಣಗಳೇ ಇರಲಿಲ್ಲ. ಖುಷಿಯಿಂದ ಒಪ್ಪಿಕೊಂಡುಬಿಟ್ಟೆ’ ಹಿತಾ ಚಂದ್ರಶೇಖರ್, ‘ಶುಭಮಂಗಳ’ ಸಿನಿಮಾದ ಬಗ್ಗೆ ಹೇಳುವುದು ಹೀಗೆ.

ಅವರಿಗೆ ಈ ಸಿನಿಮಾದಲ್ಲಿ ಖುಷಿಕೊಟ್ಟ ಇನ್ನೊಂದು ಕಾರಣವೂ ಇದೆ. ‘ಈ ಸಿನಿಮಾ ಚಿತ್ರೀಕರಣವಾಗಿದ್ದು ನನ್ನ ಮದುವೆಯಾದ ವರ್ಷವೇ. ಹಾಗಾಗಿ ಒಂದೇ ವರ್ಷದಲ್ಲಿ ಎರಡು ಬಾರಿ ವಧುವಿನ ಕಾಸ್ಟ್ಯೂಮ್ ಧರಿಸುವ ಅದೃಷ್ಟ ನನ್ನದಾಗಿತ್ತು’ ಎಂದು ಜೋರಾಗಿ ನಗುತ್ತಾರೆ ಅವರು.

ಸಂತೋಷ್ ಗೋಪಾಲ್ ನಿರ್ದೇಶಿಸಿರುವ ‘ಶುಭಮಂಗಳ’ ಸಿನಿಮಾ ಅಕ್ಟೋಬರ್ 14ಕ್ಕೆ ಬಿಡುಗಡೆಯಾಗುತ್ತಿದೆ. ಈಗಾಗಲೇ ಈ ಸಿನಿಮಾದ ಟ್ರೇಲರ್ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟುಸದ್ದನ್ನೂ ಮಾಡುತ್ತಿದೆ. ಈ ಚಿತ್ರದಲ್ಲಿ ಹಿತಾ ವಧುವಾಗಿ ಕಾಣಿಸಿಕೊಂಡಿದ್ದಾರೆ.

‘ಚಿತ್ರದ ಕಥೆಯ ಜೊತೆಗೆ ನನ್ನ ಪಾತ್ರವೂ ಅಷ್ಟೇ ಆಸಕ್ತಿಕರವಾಗಿದೆ. ಒಂದೋ ನನಗೆ ತುಂಬ ಆಪ್ತವೆನಿಸುವ ಪಾತ್ರವಾಗಿರಬೇಕು, ಇಲ್ಲಾ ನನಗೆ ಭಯ ಹುಟ್ಟಿಸುವ ಪಾತ್ರವಾಗಿರಬೇಕು. ಅಂಥ ಪಾತ್ರಗಳನ್ನೇ ನಾನು ಒಪ್ಪಿಕೊಳ್ಳುವುದು. ಈ ಸಿನಿಮಾದ ಪಾತ್ರ ಎರಡನೇ ಬಗೆಯದ್ದು. ಈ ಪಾತ್ರಕ್ಕೂ ನನ್ನ ಸ್ವಭಾವಕ್ಕೂ ಸಂಬಂಧವೇ ಇಲ್ಲ. ಹಾಗಾಗಿಯೇ ಆ ಪಾತ್ರ ಭಯ ಹುಟ್ಟಿಸುತ್ತದೆ, ಹಾಗೇ ಸವಾಲನ್ನೂ ಹಾಕುತ್ತದೆ. ನನಗೆ ಅಂಥ ಸವಾಲುಗಳೆಂದರೆ ಇಷ್ಟ. ಅದನ್ನು ಸ್ವೀಕರಿಸಿ ಈ ಪಾತ್ರದಲ್ಲಿ ನಟಿಸಿದ್ದೇನೆ’ ಎಂದು ತಮ್ಮ ಪಾತ್ರದ ಕುರಿತು ಮಾತನಾಡುತ್ತಾರೆ ಹಿತಾ.

ಒಂದು ಮದುವೆ ಮನೆಯ ಒಳಗಡೆಯೇ ನಡೆಯುವ ಹಲವು ಕಥೆಗಳು ಈ ಸಿನಿಮಾದಲ್ಲಿ ಹೆಣೆದುಕೊಂಡಿವೆಯಂತೆ. ಶೇ. 95ರಷ್ಟು ಒಂದೇ ಜಾಗದಲ್ಲಿ ಚಿತ್ರೀಕರಣ ನಡೆಸಲಾಗಿದೆ. ‘ಸುಮಾರು 20 ದಿನಗಳಲ್ಲಿಯೇ ಚಿತ್ರೀಕರಣ ಮುಗಿಸಿದೆವು. ಹಾಗೆಂದು ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡಿಲ್ಲ. ಇಡೀ ಚಿತ್ರತಂಡ ಅಷ್ಟು ಸಿದ್ಧತೆ ನಡೆಸಿತ್ತು. ಪರಸ್ಪರ ಹೊಂದಾಣಿಕೆ ಇತ್ತು. ತಮ್ಮ ಜವಾಬ್ದಾರಿಗಳನ್ನು ಎಲ್ಲರೂ ಅಚ್ಚುಕಟ್ಟಾಗಿ ನಿರ್ವಹಿಸಿದ್ದರಿಂದ ಇದು ಸಾಧ್ಯವಾಗಿದೆ’ ಎನ್ನುತ್ತಾರೆ ಅವರು.

ಹಿತಾ ಈಗ ಮುಂಬೈನಲ್ಲಿದ್ದಾರೆ. ಹಿಂದಿಯ ಒಂದು ವೆಬ್‌ಸಿರೀಸ್‌ನಲ್ಲಿ ಅವರು ನಟಿಸುತ್ತಿದ್ದಾರೆ. ‘ನನಗೆ ಬೆಂಗಳೂರು ಮತ್ತು ಮುಂಬೈ ಎರಡೂ ಕಡೆ ಮನೆಗಳಿವೆ. ನಾನು ಓಪನ್ ಆಗಿಯೇ